ಶ್ರೀ ಬಿ. ಬಸವಣ್ಣಪ್ಪ.—ಇದನ್ನು ಆರ್ಥ ಮಾಡಿಕೊಂಡು, ನಾವು ೨೫ ಸಾವಿರ ಟನ್ ಅಕ್ಕಿಯನ್ನು ಬೇಡಿಕೆಗನುಗುಣವಾಗಿ ವಿತರಣೆ ಮಾಡುತ್ತಿದ್ದೇವೆ.

ಡಾ. ವಿ ಎಸ್. ಆಚಾರ್ಯ.—ಬೇರೆ ಕಡೆಯಿಂದ ತರಬೇಕಾದರೆ ತೊಂದರೆಯಾಗುತ್ತಿದೆ. ಇದರ ಬಗ್ಗೆ ತಾವು ವಿಶೇಷ ಗಮನ ಕೊಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಮಂಗಳೂರು ಜಿಲ್ಲೆಯ ಬಗ್ಗೆ ಶಾಸಕರು ಕಾಗದ ಬರೆದಿದ್ದಾರೆ. ಅದರ ಬಗ್ಗೆ ಕ್ರಮ ತೆಗೆದುಕೊಂಡಿದೆ.

ಡಾ. ವಿ. ಎಸ್. ಆಚಾರ್ಯ. – ಈಗ ರಾಜ್ಯದಲ್ಲಿ ಅಂತರ್ಜಿಲ್ಲಾ ಸಾಗಾಣಿಕೆ ನಿರ್ಬಂಧ ಇದೆಯೇ ?

ಶ್ರೀ ಜಿ. ಬಸವಣ್ಣಪ್ಪ.—ಮಿಲ್ ಪಾಯಿಂಟ್‌ನಲ್ಲಿ ೫೦ ಪರ್ಸೆಂಟ್ ಲೆವಿ ಕೊಡಬೇಕು. ಕೊಟ್ಟು NOC ದಿ ಡೆಪಟಿ ಕಮೀಷನ್ನರಿಂದ ಪಡೆದ ಮೇಲೆ ಹೊರಗಡೆ ಅಕ್ಕಿ ಸಾಗಿಸಬಹುದು.

ಡಾ. ವಿ. ಎಸ್. ಆಚಾರ್ಯ.—ನಮ್ಮ ಜಿಲ್ಲೆಗೆ ಭತ್ತ ಬರತಕ್ಕಂಥಾದ್ದು ನಿಂತು ಹೋಗಿದೆ. ಮಿಲ್ ಪಾಯಿಂಟ್ ಲೆವಿ ಕೊಟ್ಟರೂ ಅಧಿಕಾರಿಗಳು ಸಾಕಷ್ಟು ತೊಂದರೆ ಕೊಡುತ್ತಾ ಇದ್ದಾರೆ. ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ.

ಶ್ರೀ ಜಿ. ಬಸವಣ್ಣಪ್ಪ,—ರೈತರ ಮಟ್ಟದಲ್ಲಿ ಲೆವಿಯನ್ನು ರದ್ದು ಮಾಡಿದ್ದೇವೆ. ಮಿಲ್ ಪಾಯಿಂಟ್ ಲೆವಿಯನ್ನು ವಸೂಲಿ ಮಾಡಬೇಕು. ಟಾರ್ಗೆಟ್ ಇನ್ನೂ ರೀಚ್ ಮಾಡುವುದಕ್ಕೆ ಆಗಿಲ್ಲ. ೧೬ ಜಿಲ್ಲೆಗಳಿಗೆ ಅಭಾವ ಪರಿಸ್ಥಿತಿ ಇದೆ. ನಾವು ಮಿಲ್ ಪಾಯಿಂಟ್ ಲೆವಿಯನ್ನು ವಸೂಲು ಮಾಡಲೇಬೇಕು ಬೇರೆ ವಿಧಿಯಿಲ್ಲ.

ಉಪಾಧ್ಯಕ್ಷರು.—ಈಗ ೩೧ನೇ ಪ್ರಶ್ನೆ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಮುಂದಿನ ೩೨ನೇ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

ಶ್ರೀ ಜಿ. ನಾರಾಯಣ ಕುಮಾರ್.—ಆಹಾರದ ಬಗ್ಗೆ ನನಗೆ ಹೇಳುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು —ಅವಕಾಶ ಕೊಡುತ್ತೇನೆ.

ಶ್ರೀ ಜಿ. ನಾರಾಯಣ ಕುಮಾರ್.—ಬಿನ್ನಿಪೇಟೆ ಕ್ಷೇತ್ರದಲ್ಲಿ ಬಹಳ ಜನ ಬಡವರಿದ್ದಾರೆ.

ಉಪಾಧ್ಯಕ್ಷರು.—ತಮಗೆ ಇನ್ನೊಂದು ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

ವಿಷಯ.—ಶ್ರೀ ಗೋವಿಂದರಾಜು ಅವರಿಗೆ ಪರಿಹಾರ ಧನ ನೀಡಿರುವ ಬಗ್ಗೇ.

ಪ್ರಶ್ನೆ ೭೨. ಶ್ರೀ ಬಿ. ಎಸ್. ಯಡಿಯೂರಪ್ಪ(ಶಿಕಾರಿಪುರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಹಿಂದಿನ ಲೋಕೋಪಯೋಗಿ ಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ ೧೯ನೇ ಫೆಬ್ರುವರಿ ೧೯೮೧ರಂದು ಶಿವಮೊಗ್ಗಕ್ಕೆ ಭೇಟಿ ಇತ್ತ ವಿಧಾನ ಸಭಾ ಸದಸ್ಯರ ಶಾಸನ ಸಮಿತಿಯು ಶಿಫಾರಸ್ಸಿನ ಮೇಲೆ, ಸರ್ಕಾರವು ೨೦,೦೦೦ ರೂ. ಗಳ ಪರಿಹಾರ ಧನವನ್ನು ಉಚ್ಚಾಧ್ಯಾಯರೂ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಗೋವಿಂದರಾಜು ಅವರ ಕುಟುಂಬಕ್ಕೆ ಕೊಡಲು ನಿರ್ಧರಿಸಿರುವುದು ನಿಜವೆ ?

ಆ) ಹಾಗಿದ್ದ ಪಕ್ಷದಲ್ಲಿ ಯಾವ ಕಾರಣಗಳಿಗಾಗಿ ಈ ಪರಿಹಾರ ಧನವನ್ನು ಮೃತರ ಕುಟುಂಬಕ್ಕೆ ಈವರೆಗೆ ಕೊಡಲಿಲ್ಲ.

ಶ್ರೀ ರಾಮಕೃಷ್ಣಹೆಗಡೆ (ಮುಖ್ಯ ಮಂತ್ರಿಯವರು).—

ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಮೃತರ ಕುಟುಂಬಕ್ಕೆ ಪರಿಹಾರವಾಗಿ ೫,೦೦೦ ರೂ. ಗಳನ್ನು ಮಂಜೂರು ಮಾಡಿದೆ.

ಈ ಪರಿಹಾರ ಧನವನ್ನು ಪಾವತಿ ಮಾಡಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ದಿನಾಂಕ ೨೩ನೇ ಜನವರಿ ೧೯೮೧ರಲ್ಲಿ ನಡೆದ ಒಂದು ದುರ್ಘಟನೆ ಪರಿಣಾಮವಾಗಿ, ಶಿವಮೊಗ್ಗ ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀಯುತ ಗೋವಿಂದರಾಜ್‌ರವರು ತಲೆಗೆ ಹೊಡೆತ ಬಿದ್ದು ಅವರು ದೈವಾಧೀನರಾದರು. ತಾರೀಖು ೧೯ನೇ ಫೆಬ್ರುವರಿ ೧೯೮೧ರಲ್ಲಿ ಶ್ರಿಮಾನ್ ಕಾಗೋಡು ತಿಮ್ಮಪ್ಪನವರ ನೇತೃತ್ವದಲ್ಲಿ ೧೫ ಜನ ಶಾಸಕರು ತನಿಖೆ ಮಾಡಿ ಮೃತರ ಕುಟುಂಬದವರೊಂದಿಗೆ ವಿಚಾರ ವಿನಿಮಯಮಾಡಿದರು. ದಿವಂಗತ ಗೋವಿಂದರಾಜು ರವರು ಖಾಸಗಿ ಪ್ರೌಢಶಾಲೆಯಲ್ಲಿ ಉಪಾಧ್ಯಾಯರಾಗಿದ್ದರು. ಅವರು ಸರ್ಕಾರಿ ನೌಕರರಾಗಿದ್ದರೆ ಎಲ್ಲಾ ಸೌಲಭ್ಯ ಸಿಗುತ್ತಿತ್ತು. ಅವರು ಸರ್ಕಾರಿ ನೌಕರರಲ್ಲದೇ ಇರುವುದರಿಂದ ಅವರಿಗೆ ಯಾವುದೇ ಸೌಲಭ್ಯ ಸಿಗದೆ ಇರುವ ಕಾರಣ ಅವರು ಕುಟುಂಬವರ್ಗದವರು ಬಹಳ ತೊಂದರೆಯಲ್ಲಿದ್ದಾರೆ. ಅವರಿಗೆ ಒಬ್ಬ ಗಂಡು ಮಗು, ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರ ನೇತೃತ್ವದ ಶಾಸಕರ ಸಮಿತಿಯಂ ಇದನ್ನೆಲ್ಲಾ ತನಿಖೆ ಮಾಡಿ ಅವರಿಗೆ ೨೦ ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡುತ್ತೇವೆಂದು ಆಶ್ವಾಸನೆ ಕೊಟ್ಟರು. ಈ ಸುದ್ದಿ ೨೨ ಮತ್ತು ೨೩ನೇ ಫೆಬ್ರುವರಿ ೧೯೮೧ರಲ್ಲಿ ಪ್ರಚಾರವಾಯಿತು. ಆದುದರಿಂದ ಮೃತರ ಕುಟುಂಬದವರಿಗೆ ೨೦ ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳು ೫ ಸಾವಿರ ರೂಪಾಯಿಗಳನ್ನು ಕೊಟ್ಟಿದೆ ಎಂದು ಹೇಳಿದರು. ಇದೂ ಮುಂಚೆ ಕೊಟ್ಟಂಥ ಪರಿಹಾರ. ಅದಾದ ಮೇಲೆ ೨೦ ಸಾವಿರ ರೂಪಾಯಿ ಗಳನ್ನು ಕೊಡುತ್ತೇವೆಂದು ಹೇಳಿದರು, ಹಿಂದೆ ಈ ಸದನದಲ್ಲಿ ಮಾನ್ಯ ಲಕ್ಷ್ಮೀಸಾಗರ್‌ರವರು, ಮಾನ್ಯ ಚಂದ್ರಶೇಖರ್‌ರವರು, ಮಾನ್ಯ ಸುಬ್ಬಯ್ಯನವರು ಎಲ್ಲರೂ ಈ ಬಗ್ಗೆ ಪ್ರಶ್ನೆ ಮಾಡಿದ್ದಾರೆ. ಆದ್ದರಿಂದ ದಿವಂಗತ ಗೋವಿಂದರಾಜುರವರ ಕುಟುಂಬವರಿಗೆ ೨೦ ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜಿಗಜಿನ್ನಿ ರೇವಣ್ಣಸಿದ್ದಪ್ಪ.—ಮಾನ್ಯ ಅಧ್ಯಕ್ಷರೆ. ಮಾನ್ಯ ಯಡಿಯೂರಪ್ಪನವರು ೧೯ನೇ ಫೆಬ್ರುವರಿ ೧೯೮೧ರಂದು ಪ್ರಸ್ತುತ ವಿಷಯದ ಬಗ್ಗೆ ಒಂದು ಕಮಿಟಿ ಮಾಡಿದರು ಎಂದು ಹೇಳಿದರು. ಆ ಕಮಿಟಿ ಮಾಡಿದ್ದು ನಿಜ. ಆಗ ಕಮಿಟಿಯಲ್ಲಿ ಯಾವ ನಿರ್ಣಯ ತೆಗೆದುಕೊಂಡರೋ ಗೊತ್ತಿಲ್ಲ. ಮೃತರ ಕುಟುಂಬಕ್ಕೆ ೫ ಸಾವಿರ ರೂಪಾಯಿಗಳ ಪರಿಹಾರಧಾನವನ್ನು ಈಗಾಗಲೆ ಒದಗಿಸಲಾಗಿದೆ. ಈಗ ಕೊಟ್ಟಿರುವ ೫ ಸಾವಿರ ರೂಪಾಯಿಗಳನ್ನು ಬಿಟ್ಟು ಜಾಸ್ತಿ ಕೊಡಲಿಕ್ಕೆ ಪ್ರಾವಿಜನ್ ಇಲ್ಲ. ಆದ್ದರಿಂದ ೫ ಸಾವಿರ ರೂಪಾಯಿ ಮಾತ್ರ ಕೊಟ್ಟಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ. — ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಕಛೇರಿಯಿಂದ ಅವರಿಗೆ ಹಣ ಕೊಡಬಹುದೇ ಎಂದು ಎಸ್.ಪಿ. ಯವರಿಗೆ ಕೇಳಿದ್ದಾರೆ. ಎಸ್. ಪಿ. ಯವರು ಕೊಡಬಹುದು ಎಂದು ಉತ್ತರ ಕೊಟ್ಟಿದ್ದಾರೆ. ತಾವು ಫೈಲ್ ನೋಡಬಹುದು ದಯವಮಾಡಿ ಮೃತರ ಕುಟುಂಬಕ್ಕೆ ೨೦ ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಸಚಿವರು ೫ ಸಾವಿರ ರೂಪಾಯಿಗಳಿಗಿಂತ ಜಾಸ್ತಿ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಕೊಡಲಿಕ್ಕೆ ಸಾಧ್ಯವಿದೆ. ಇದು ಗಹನವಾದಂಥ ಪ್ರಶ್ನೆ. ಅವರಿಗೆ ಪರಿಹಾರವನ್ನು ಕೊಡಬೇಕು ಎಂದು ಹಿಂದೆ ಸರ್ಕಾರದ ಚಿಂತನೆಯಲ್ಲಿತ್ತು, ಕೊಡಲಿಕ್ಕೆ ಆಗಲಿಲ್ಲ. ಆದ್ದರಿಂದ ಇನ್ನು ಮುಂದಾದರೂ ೨೦ ಸಾವಿರ ರೂಪಾಯಿಗಳ ಪರಿಹಾರವನ್ನು ಅವರ ಕುಟುಂಬ ವರ್ಗದವರಿಗೆ ಕೊಡಲಿಕ್ಕೆ ತೊಂದರೆಯೇನು ?

ಒಬ್ಬ ಮಾನ್ಯ ಸದಸ್ಯರು.—೨೦ ಸಾವಿರ ಅಲ್ಲ ೫೦ ಸಾವಿರ ಕೊಡಬಹುದು.

ಶ್ರೀ ಹೆಚ್. ಡಿ. ದೇವಗೌಡ.—ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಈ ವಿಷಯದಲ್ಲಿ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ತಾರೀಖು ೧೯ನೇ ಫೆಬ್ರುವರಿ ೧೯೮೧ರಲ್ಲಿ ಅಂದಿನ ಸಮಿತಿಯಂವರು ಅವರಿಗೆ ೨೦ ಸಾವಿರ ರೂಪಾಯಿಗಳ ಪರಿಹಾರ ಧನವನ್ನು ಕೊಡಬೇಕೆಂದು ಶಿಫಾರಸು ಮಾಡಿದ್ದಾರೆಂಬ ಪ್ರಶ್ನೆ ಯನ್ನು ಕೇಳಿದ್ದಾರೆ. ಅವರು ಶಿಫಾರಸು ಮಾಡಿದ್ದಾರೋ ಇಲ್ಲವೋ ಎನ್ನುವುದಕ್ಕಿಂತ ಹೆಚ್ಚಾಗಿ ಮಾನವೀಯಂತೆಯ ದೃಷ್ಟಿಯಿಂದ ಈ ಸರ್ಕಾರ ಸಹಾಯ ಮಾಡಬೇಕು ಎಂದು ತಿಳಿದುಕೊಂಡು ಪರಿಶೀಲನೆ ಮಾಡುತ್ತೇವೆ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಕೊಡಬಹುದು ಎಂದು ಹೇಳಿದರು. ಅವರು ಆಗಲೇ ಕೊಡಬಹುದಾಗಿತ್ತು, ಏಕೆ ದಂ ನಿಂತಿದೆಯೋ ಗೊತ್ತಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಸರ್ಕಾರ ಬಂದು ೨ ತಿಂಗಳಾದರೂ ತಾವು ಏಕೆ ಕೊಟ್ಟಿಲ್ಲ ?

ಶ್ರೀ ಹೆಚ್. ಡಿ. ದೇವಗೌಡ.—ತಾವು ೨ ವರ್ಷ ಶ್ರಮಪಟ್ಟು ಇದ್ದೀರಿ ಆಗಲೇ ಕೊಡಬಹುದಾಗಿತ್ತಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಈ ೨ ತಿಂಗಳೊಳಗೆ ಕೊಡಬಹುದಾಗಿತ್ತು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಧ್ಯ ಮಧ್ಯ ಪ್ರವೇಶ ಮಾಡಿ ಮಾತನಾಡುತ್ತಿದ್ದರೆ, ಗಂಡ ಹೆಂಡತಿ ಜಗಳದಲ್ಲಿ ಕೂಸು ಬಡವಾಯಿತು ಎನ್ನುವ ಹಾಗಾಗುತ್ತದೆ. ಅವರ ಕುಟುಂಬದ ಪರಿಸ್ಥಿತಿಯನ್ನು ದಯವಿಟ್ಟು ಮಾನ್ಯ ಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು.

ಒಬ್ಬ ಮಾನ್ಯ ಸದಸ್ಯರು.—ಶಿವಮೊಗ್ಗ ನಗರಸಭೆಯವರು ಅವರ ಕುಟುಂಬ ವರ್ಗದವರಿಗೆ ೬೦X೨೦ ಸೈಟ್‌ನ್ನು ಗ್ರಾಂಟ್ ಮಾಡಿದ್ದಾರೆ ಆದರೆ ಇದರ ಬಗ್ಗೆ ಡಿವಿಜನಲ್ ಕಮಿಷನರ್‌ರವರಿಗೆ ಎಷ್ಟು ಸಾರಿ ಪತ್ರ ಬರೆದರೂ ಅದನ್ನು ಮಂಜೂರು ಮಾಡಿಲ್ಲ. ಆದುದರಿಂದ ಆ ಕೆಲಸವನ್ನೂ ಸಹ ಆದಷ್ಟು ಬೇಗ ಮಾಡಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಯಡಿಯೂರಪ್ಪನವರು ಈ ವಿಷಯವನ್ನು ನಮ್ಮ ಗಮನಕ್ಕೆ ತರಬೇಕಾದರೆ ೨ ತಿಂಗಳಾಗಿದೆ, ಆದುದರಿಂದ ನಾವು ಗಮನ ಕೊಟ್ಟಿಲ್ಲವೆಂದು ಅಲ್ಲ, ನಾವು ಪ್ರತಿಯೊಂದು ಇಲಾಖೆಯಲ್ಲೂ ಹಿಂದೆ ನಡೆದು ಹೋಗಿರತಕ್ಕದರ ಬಗ್ಗೆ ಹೇಗೆ ತಿಳಿದುಕೊಳ್ಳಲು ಸಾಧ್ಯ?

ಶ್ರೀ ಕೆ. ಎಚ್. ರಂಗನಾಥ್.—ಶ್ರೀ ದೇವೇಗೌಡರವರಿಗೆ ಎಲ್ಲಾ ವಿಷಯ ಗೊತ್ತಿದೆ, ಗೊತ್ತಿಲ್ಲ ವೆಂದು ಏನೂ ಇಲ್ಲ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದು ೨ ತಿಂಗಳಾದರೂ ಏತಕ್ಕೆ ಸುಮ್ಮನೇ ಇದ್ದೀರಿ ತಕ್ಷಣವೇ ಕೊಡಬಹುದಾಗಿತ್ತಲ್ಲ ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಅವರು ಅಧಿಕಾರದಲ್ಲಿದ್ದಾಗ ಈ ಪರಿಹಾರ ಕೊಡಲಿಲ್ಲ. ಎನ್ನತಕ್ಕದ್ದನ್ನು ನಮ್ಮ ಗಮನಕ್ಕೆ ಈಗ ತಂದಿದ್ದಾರೆ. ಹಿಂದಿನ ಸರ್ಕಾರದವರು ಕೊಟ್ಟಿಲ್ಲ ಎನ್ನುವ ದೋಷವನ್ನು ಹೇಳುವುದಕ್ಕೆ ನಾನು ಹೋಗಲಿಲ್ಲ ವಾಸ್ತವಾಂಶವನ್ನು ಹೇಳಿದೆ ಅಷ್ಟೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇವರ ಅವರು ಮಾಡಲಿಲ್ಲವೆಂದು ಹೇಳಲಿಲ್ಲ. ಇವತ್ತು ಯಾರಿಗೆ ಗಲಾಟೆಯಲ್ಲಿ ತೊಂದರೆಯಾಗಿದೆ ಅವರಿಗೆ ಪರಿಹಾರ ಕೊಡುವ ಬಗ್ಗೆ ದಯವಿಟ್ಟು ಗಮನಕೊಟ್ಟು ಹೇಳಬೇಕು.

ಶ್ರೀ ಕೆ. ಎಚ್. ರಂಗನಾಥ್.—೫ ಸಾವಿರಕ್ಕಿಂತ ಹೆಚ್ಚಿಗೆ ಕೊಡುವುದಕ್ಕಾಗುವುದಿಲ್ಲವೆಂದು ಸರ್ಕಾರದಿಂದ ಉತ್ತರ ಬಂದಿದೆ. ಮುಖ್ಯಮಂತ್ರಿಗಳವರ ಪರಿಹಾರ ನಿಧಿಯಿಂದ ಕೊಡಬಹುದಾಗಿತ್ತಲ್ಲ ಎಂದೇ ಈ ಪ್ರಶ್ನೆ ಉದ್ಭವಿಸಿದ್ದು.

ಶ್ರೀ ಎಚ್. ಡಿ. ದೇವೇಗೌಡ.—ಇಂಥಾ ಘಟನೆಗಳಲ್ಲಿ ೫ ಸಾವಿರ ರೂಪಾಯಿಗಳನ್ನು ಸರ್ವೇ ಸಾಮಾನ್ಯವಾಗಿ ಕೊಟ್ಟುಕೊಂಡು ಬರುತ್ತಿದ್ದೇವೆ. ಆದರೆ ಅವರ ಪರಿಸ್ಥಿತಿ ತುಂಬಾ ಚಿಂತಾಜನಕವಾಗಿರುವುದರಿಂದ ಮುಖ್ಯಮಂತ್ರಿಗಳವರ ಪರಿಹಾರ ಧನದಿಂದ ಕೊಡತಕ್ಕಂಥದರ ಬಗ್ಗೆ ಈಗ ತಾನೇ ಸರ್ಕಾರದವರ ಗಮನಕ್ಕೆ ತಂದಿದ್ದಾರೆ ಅತಿ ಶೀಘ್ರವಾಗಿ ಅದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.